ದಿನಾಂಕ 09.10.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ರಿಂದ 9ನೇ ಪ್ರತಿವಾದಿಗಳ ಪರ ಶ್ರೀ ಸಿ.ಆರ್.ಎಸ್., ವಕೀಲರಿಂದಃ-

ನಾನು 6ನೇ ತರಗತಿಯವರೆಗೆ ಓದಿದ್ದೇನೆ. ಈ ದಾವೆಯಲ್ಲಿನ 1ನೇ ವಾದಿಯ ಪರವಾಗಿಯೂ ನನ್ನ ಪ್ರಮಾಣಪತ್ರ ಸಲ್ಲಿಸಿರುವುದಾಗಿ ಬರೆಸಲಾಗಿದ್ದು ಈ ಬಗ್ಗೆ ನನ್ನ ತಾಯಿ ನನಗೆ ಅಧಿಕಾರ ಪತ್ರವನ್ನು ಕೊಟ್ಟಿಲ್ಲ. ಈ ದಾವೆಯಲ್ಲಿ ನಾವು ಮೂರು ಸ್ವತ್ತುಗಳಿಗೆ ಸಂಬಂಧಿಸಿದಂತೆ ಪರಿಹಾರ ಕೋರಿರುತ್ತೇವೆ. ಸದರಿ ಮೂರು ಸ್ವತ್ತುಗಳಿಗೆ ಸಂಬಂಧಿಸಿದ ದಾವೆ ದಾಖಲಿಸಿದ ವರ್ಷಕ್ಕೆ ಸಂಬಂಧಿಸಿದ ಪಹಣಿಗಳನ್ನು ಹಾಜರುಪಡಿಸಿದ್ದೇನೆ. ದಾವಾ ಅನುಸೂಚಿ 3ನೇ ಸ್ವತ್ತು ಕೃಷ್ಣಪ್ಪ ಹಾಗೂ ಸರೋಜಮ್ಮನ ಹೆಸರಿನಲ್ಲಿರುತ್ತದೆ. ಸದರಿಯವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎನ್ನುವುದು ಸರಿಯಲ್ಲ.

2. ದಾವಾ ಅನುಸೂಚಿ 1ನೇ ಸ್ವತ್ತು ಭಾಗ್ಯಮ್ಮ ಹಾಗೂ ಶ್ರೀನಿವಾಸ್‌ರವರ ಹೆಸರಿನಲ್ಲಿದೆ. ಸದರಿ ಭಾಗ್ಯಮ್ಮ ನಮ್ಮ ದೊಡ್ಡಪ್ಪನ ಸೊಸೆ. ಆಕೆ ರಂಗಸ್ವಾಮಯ್ಯನ ಸೊಸೆಯಾಗಿದ್ದು ಆತನ ಮಗಳಲ್ಲ. 3ನೇ ಪ್ರತಿವಾದಿ ಶ್ರೀನಿವಾಸ್‌ರವರ ಹೆಂಡತಿಯ ಹೆಸರು ಭಾಗ್ಯಲಕ್ಷ್ಮಿ. ಸದರಿ ಭಾಗ್ಯಲಕ್ಷ್ಮಿಯನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಈ ದಾವೆಯ ದಾವಾ ಅನುಸೂಚಿ 1ನೇ ಸ್ವತ್ತು ಶ್ರೀನಿವಾಸ್ ಹಾಗೂ ಆತನ ಹೆಂಡತಿ ಭಾಗ್ಯಲಕ್ಷ್ಮಿರವರ ಹೆಸನರಿಲ್ಲಿದೆ. ಮೂಲ ಪುರುಷ ನಡಕೇರಯ್ಯ ನನ್ನ ಮುತ್ತಾತ. ಸದರಿ ನಡಕೇರಯ್ಯನಿಗೆ ಇಬ್ಬರು ಮಕ್ಕಳು. ಅವರ ಹೆಸರುಗಳು ಎಸ್.ಎನ್.ತಿಮ್ಮಯ್ಯ ಹಾಗೂ ಕರಡಪ್ಪ.

ಎಸ್.ಎನ್.ತಿಮ್ಮಯ್ಯನಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಮಗಳು. ಸದರಿಯವರನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ. ಕರಡಪ್ಪನಿಗೆ ಇಬ್ಬರು ಮಕ್ಕಳಿದ್ದು ಅವರ ಹೆಸರುಗಳು ಚನ್ನಗಿರಯ್ಯ ಹಾಗೂ ಪುಟ್ಟೀರಮ್ಮ. ಪುಟ್ಟೀರಮ್ಮ ಪೌತಿಯಾಗಿದ್ದಾರೆ. ಪುಟ್ಟೀರಮ್ಮನಿಗೆ ಮೂರು ಜನ ಮಕ್ಕಳಿದ್ದು ಅವರೆಲ್ಲರೂ ಜೀವಂತವಾಗಿದ್ದಾರೆ. ನನ್ನ ತಂದೆ ಚನ್ನಗಿರಯ್ಯನಿಗೆ ಮೂರು ಜನ ಹೆಣ್ಣು ಮಕ್ಕಳು ಹಾಗೂ ನಾನು ಒಬ್ಬ ಮಗ. ನನ್ನ ಅಕ್ಕ ತಂಗಿಯರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ಈ ದಾವೆಯನ್ನು ನಾವು ಭಾಗ ಕೋರಿ ದಾಖಲಿಸಿದ್ದೇವೆ. ಹೊಂಬಾಳಮ್ಮ ಯಾರು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ನಿಂಗಮ್ಮ. ನನ್ನ ತಾಯಿಯ ಮತ್ತೊಂದು ಹೆಸರು ಹೊಂಬಾಳಮ್ಮ ಎನ್ನುವುದು ಸರಿಯಲ್ಲ. ಕರಡಪ್ಪನ ಹೆಂಡತಿಯ ಹೆಸರು ಹೊಂಬಮ್ಮ.

3. ನನ್ನ ತಂದೆಯ ಜೀವಿತ ಕಾಲದಲ್ಲಿಯೇ ಮೌಖಿಕವಾಗಿ ವಿಭಾಗ ಮಾಡಿಕೊಳ್ಳಲಾಗಿತ್ತು ಎನ್ನುವುದು ಸರಿಯಲ್ಲ. ಸದರಿ ವಿಭಾಗದ ಪ್ರಕಾರ ನಿಮ್ಮ ತಂದೆ ಹಾಗೂ ನಿಮ್ಮ ಚಿಕ್ಕಪ್ಪ ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದರು? ಎಂದರೆ ಸಾಕ್ಷಿಯು ನಾವು ವ್ಯವಸಾಯ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.144/2 ರಲ್ಲಿ 34 ಗುಂಟೆ ಜಮೀನು ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎನ್ನುವುದು ಸರಿಯಲ್ಲ. ಸದರಿ ಸ್ವತ್ತನ್ನು ದಿನಾಂಕ 24.02.1970 ರಂದು ನಿಮ್ಮ ತಂದೆ ಚೋಳೂರಯ್ಯನಿಗೆ ಮಾರಾಟ ಮಾಡಿದರು? ಎಂದರೆ ಸಾಕ್ಷಿಯು ನಮ್ಮ ಭಾಗಕ್ಕೆ ಯಾವುದೇ ಸ್ವತ್ತು ಬಂದಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರ ನಮಗೆ ಗೊತ್ತಿದ್ದು ಅದನ್ನು ಮುಚ್ಚಿಟ್ಟಿದ್ದೇವೆ ಎನ್ನುವುದು ಸರಿಯಲ್ಲ. ಚೋಳೂರಯ್ಯನಿಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ನನ್ನ

ತಂದೆ ತನ್ನ ಭಾಗಕ್ಕೆ ಬಂದಿರುವ ಸ್ವತ್ತನ್ನು ಕ್ರಯಕ್ಕೆ ಕೊಡುತ್ತಿರುವುದಾಗಿ ಸ್ಪಷ್ಟವಾಗಿ ಕಾಣಿಸಲಾಗಿದೆ ಎನ್ನುವುದು ಸರಿಯಲ್ಲ.

4. ದಾವಾ ಅನುಸೂಚಿ 2ನೇ ಸ್ವತ್ತು ನನ್ನ ಚಿಕ್ಕಪ್ಪ ತಿಮ್ಮಯ್ಯನ ಭಾಗಕ್ಕೆ ಬಂದಿದ್ದು ಅದನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ತಿಮ್ಮಯ್ಯನ ವಾರಸುದಾರರು ಈ ದಾವೆಯ 1 ರಿಂದ 9ನೇ ಪ್ರತಿವಾದಿಗಳು ಎನ್ನುವುದು ನಿಜ. ನನ್ನ ತಂದೆ ಚೋಳೂರಯ್ಯನಿಗೆ ಮಾರಾಟ ಮಾಡಿದ ಸ್ವತ್ತನ್ನು ಸದರಿ ಚೋಳೂರಯ್ಯ ದಿನಾಂಕ 22.06.1998 ರಂದು 3ನೇ ಪ್ರತಿವಾದಿಯ ಹೆಂಡತಿ ಭಾಗ್ಯಲಕ್ಷ್ಮಿಯ ಹೆಸರಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ನನ್ನ ತಂದೆ ಹಾಗೂ ನಾನು ಸಾಕ್ಷಿದಾರರಾಗಿ ಸಹಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಚೋಳೂರಯ್ಯನಿಗೆ ಮಾರಾಟ ಮಾಡಲಾದ ಸ್ವತ್ತೇ ಈ ದಾವೆಯ ದಾವಾ ಅನುಸೂಚಿ 1ನೇ ಸ್ವತ್ತು ಎನ್ನುವುದು ನಿಜ. 3ನೇ ಪ್ರತಿವಾದಿಯ ಹೆಂಡತಿ ಭಾಗ್ಯಲಕ್ಷ್ಮಿಯ ಹೆಸರಿಗೆ ಆಗಿದ್ದಂತಹ ಕ್ರಯದ ಕರಾರು ಪತ್ರದ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 07.01.1999 ರಂದು ಕ್ರಯಪತ್ರವಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವಾಗಿರುವ ವಿಚಾರವೂ ಸಹ ನನಗೆ ಗೊತ್ತಿದೆ ಎನ್ನುವುದು ಸರಿಯಲ್ಲ. ಈಗಾಗಲೇ ನನ್ನ ತಂದೆ ತನ್ನ ಭಾಗಕ್ಕೆ ಸ್ವತ್ತನ್ನು ಪಡೆದುಕೊಂಡು ಅದನ್ನು ಮಾರಾಟ ಮಾಡಿರುವ ಕಾರಣ ನಮ್ಮ ಭಾಗಕ್ಕೆ ಬರುವಂತಹ ಯಾವುದೇ ಸ್ವತ್ತು ದಾವಾ ಅನುಸೂಚಿ 1 ಹಾಗೂ 2ನೇ ಸ್ವತ್ತುಗಳಲ್ಲಿ ಇಲ್ಲ ಎನ್ನುವುದು ಸರಿಯಲ್ಲ.

5. ದಾವಾ ಅನುಸೂಚಿ 3ನೇ ಸ್ವತ್ತನ್ನು ನಮ್ಮ ಕುಟುಂಬದ ಮೂಲ

ಪುರುಷ 40-50 ವರ್ಷಗಳ ಹಿಂದೆಯೇ ಮಾರಾಟ ಮಾಡಿರುವ ಕಾರಣ ಸದರಿ ಸ್ವತ್ತು ಸಹ ವಿಭಾಗಕ್ಕಾಗಿ ಲಭ್ಯವಿಲ್ಲ ಎನ್ನುವುದು ಸರಿಯಲ್ಲ. ದಾವಾ ಅನುಸೂಚಿ 1 ರಿಂದ 3 ನೇ ಸ್ವತ್ತುಗಳ ಭಾಗಶಃ ಸ್ವತ್ತುಗಳು ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣಕ್ಕಾಗಿ 12 ನೇ ಪ್ರತಿವಾದಿಯಿಂದ ಸ್ವಾಧೀನಕ್ಕೊಳಪಟ್ಟಿದೆ ಎನ್ನುವುದು ನಿಜ. ಸದರಿ ಸ್ವಾಧೀನದ ಸಂಬಂಧ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಬಾರದೆಂದು ನಾವು 12 ನೇ ಪ್ರತಿವಾದಿಗೆ ತಕರಾರನ್ನು ಸಲ್ಲಿಸಿದ್ದೆವು ಎನ್ನುವುದು ನಿಜ. 2021 ರಲ್ಲಿ ಸದರಿ ತಕರಾರನ್ನು ಸಲ್ಲಿಸಿದ್ದೆವು. ಅಂದರೆ ಈ ದಾವೆಯನ್ನು ದಾಖಲಿಸುವ ಸ್ವಲ್ಪ ದಿನಗಳ ಮೊದಲು? ಎಂದರೆ ಸಾಕ್ಷಿಯು ಈ ದಾವೆಯನ್ನು ದಾಖಲಿಸಿದ ನಂತರದಲ್ಲಿ ಎಂದು ನುಡಿಯುತ್ತಾರೆ. ಸದರಿ ತಕರಾರನ್ನು ಸಲ್ಲಿಸಿರುವ ಸಂಬಂಧ ನನ್ನ ಬಳಿ ಹಿಂಬರಹ ಇದೆ ಎನ್ನುವುದು ನಿಜ. ಅದನ್ನು ಹಾಜರುಪಡಿಸಿದ್ದೇನೆ.

6. 1 ನೇ ಪ್ರತಿವಾದಿ ಬೇರೆಯಾಗಿದ್ದು, ದಾವಾ ಅನುಸೂಚಿ 1 ನೇ ಸ್ವತ್ತಿನ ಖರೀದಿದಾರರಾದ ಭಾಗ್ಯಲಕ್ಷ್ಮಿಯವರೇ ಬೇರೆ ಎನ್ನುವುದು ನಿಜ. 3 ನೇ ಪ್ರತಿವಾದಿಯ ಹೆಂಡತಿ ಭಾಗ್ಯಲಕ್ಷ್ಮಿಯವರು ಭೂಸ್ವಾಧೀನದ ಪರಿಹಾರದ ಹಣವನ್ನು ಬಿಡುಗಡೆ ಮಾಡುವಂತೆ ಅರ್ಜಿ ಸಲಸ್ಲಿಸಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ನಾನು ಸದರಿ ಭಾಗ್ಯಲಕ್ಷ್ಮಿ ಹಾಗೂ ಆಕೆಯ ಗಂಡ 3 ನೇ ಪ್ರತಿವಾದಿಯನ್ನು ಭೂಸ್ವಾಧೀನದ ಹಣದ ಪೈಕಿ ಸ್ವಲ್ಪ ಹಣವನ್ನು ನನಗೆ ಕೊಡುವಂತೆ ಕೇಳಿದ್ದೆ ಎನ್ನುವುದು ಸರಿಯಲ್ಲ. ಆಗ ಸದರಿಯವರು ಸದರಿ ಸ್ವತ್ತು ತಾವು ಖರೀದಿಸಿರುವ ಸ್ವತ್ತಾಗಿದ್ದು ನಮಗೂ ಹಾಗೂ ಸದರಿ ಸ್ವತಿ2 ಗೂ ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದರು ಎನ್ನುವುದು ಸರಿಯಲ್ಲ. ಅವರು ಆ ರೀತಿ ಹೇಳಿದ

ನಂತರದಲ್ಲಿ ನೀವು ಸದರಿಯವರಿಗೆ ಪರಿಹಾರದ ಹಣವನ್ನು ಬಿಡುಗಡೆ ಮಾಡಬಾರದೆಂದು ತಕರಾರು ಅರ್ಜಿ ಸಲ್ಲಿಸಿದಿರಿ? ಎಂದರೆ ಸಾಕ್ಷಿಯು ನಾನು ಅವರ ಬಳಿ ಹೋಗಿಲ್ಲ ಎಂದು ನುಡಿಯುತ್ತಾರೆ. 12 ನೇ ಪ್ರತಿವಾದಿಯು ಭೂಸ್ವಾಧೀನಕ್ಕೊಳಪಟ್ಟ ಜಮೀನಿಗೆ 3 ನೇ ಪ್ರತಿವಾದಿಯ ಹೆಂಡತಿ ಮಾಲೀಕರಾಗಿದ್ದು ನಮಗೂ ಹಾಗೂ ಸದರಿ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದು ತಿಳಿಸಿದ್ದರು ಎನ್ನುವುದು ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು 3 ನೇ ಪ್ರತಿವಾದಿಯ ಹೆಂಡತಿಗೆ ಪರಿಹಾರದ ಹಣವನ್ನು ಬಿಡುಗಡೆ ಮಾಡುತ್ತಾರೆಂಬ ಉದ್ದೇಶದಿಂದ ಅವರೆಲ್ಲರನ್ನೂ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿ ಈ ದಾವೆಯನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ. ನಮ್ಮ ತಂದೆಯ ಜೀವಿತ ಕಾಲದಲ್ಲಿಯೇ ಅವರು ದಾವಾ ಅನುಸೂಚಿ 1 ನೇ ಸ್ವತ್ತನ್ನು ಮಾರಾಟ ಮಾಡಿರುವ ಕಾರಣ ನಮಗೆ ದಾವಾ ಅನುಸೂಚಿ 1 ಅಥವಾ 2 ನೇ ಸ್ವತ್ತಿನಲ್ಲಿ ಭಾಗಾಂಶ ಪಡೆಯಲು ಯಾವುದೇ ಹಕ್ಕಿಲ್ಲ ಎನ್ನುವುದು ಸರಿಯಲ್ಲ.

13 ನೇ ಪ್ರತಿವಾದಿಯ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.